**ಡಾ: ವಿ.ಎಸ್. ಆಚಾರ್ಯ** : ಮಾನ್ಯ ಛೇರ್ಮನ್‌ರೇ, ನಮ್ಮ ರಾಜ್ಯದಲ್ಲಿ ಶ್ವೇತ ಕ್ರಾಂತಿ ಬಹಳ ಉತ್ತಮ ರೀತಿಯಲ್ಲಿ ನಡೆದಿದೆ. ದೇಶದಲ್ಲಿಯೇ ಗುಜರಾತ್ ನಂತರ ಎರಡನೇ ಸ್ಥಾನದಲ್ಲಿ ಕರ್ನಾಟಕ ಹಾಲು ಉತ್ಪಾದನೆಯಲ್ಲಿ ಇದೆ. ಆದರೆ ಹಾಲು ಉತ್ಪಾದನೆ ಯಾವ ವೇಗದಲ್ಲಿ ಆಯಿತು, ಅಷ್ಟೇ ವೇಗದಲ್ಲಿ ಸರಿಗಟ್ಟುವಂತಹ ರೀತಿಯಲ್ಲಿ ನಮ್ಮ ಪಶುಸಂಗೋಪನಾ ವ್ಯವಸ್ಥೆ ಮಾಡಲಿಕ್ಕೆ ನಮಗೆ ಆಗಲಿಲ್ಲ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆದರೆ ಕೆಎಮ್‌ಎಫ್ ನವರ ಚಟುವಟಿಕೆ ಎಲ್ಲಿ ಇದೆ, ಅಲ್ಲಿ ಕೆಎಮ್‌ಎಫ್‌ನ ವೈದ್ಯಕೀಯ ವ್ಯವಸ್ಥೆಗೆ ಸಪೋರ್ಟ್ artificial insemination ಇತ್ಯಾದಿಗಳು ಎಲ್ಲೆ ಇರುವುದರಿಂದ ಸ್ವಲ್ಪ ಮಟ್ಟಿಗೆ, they are taken care of. ತಾವು ಹೇಳಿದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಇನ್ನು ಏನು ಮಾಡಬಹುದೋ ಅದನ್ನು ಮಾಡುತ್ತೇವೆ. ನಂಜುಂಡಪ್ಪನವರ ವರದಿಯಲ್ಲಿ ತಿಳಿಸಿರುವಂಥದ್ದು ತೀರಾ ಬಹಳ ಹಿಂದುಳಿದಂತಹ desperate cases ಅದನ್ನು ನಾವು ಅಟೆಂಡ್ ಮಾಡಲೇಬೇಕಾಗಿದೆ. ಈ ವರ್ಷ ಅದನ್ನು ಮಾಡುತ್ತೇವೆ. ತಾವು ಹೇಳಿದಂತಹ ವಿಷಯವನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

**ಪರಿಶಿಷ್ಟ ಜಾತಿ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನ ತಡೆಹಿಡಿದಿರುವುದು.**

173 (888) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನವನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮವೇನು;

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಮತ್ತು ಆ) ಸಮಾಜ ಕಲ್ಯಾಣ ಇಲಾಖೆಯು ಕಾಲೇಜು ವಿದ್ಯಾರ್ಥಿಗಳಿಗಾಗಿ ಮಂಜೂರು ಮಾಡಲಾಗುತ್ತಿರುವ ವಿದ್ಯಾರ್ಥಿ ವೇತನವನ್ನು ತಡೆಹಿಡಿದಿರುವುದಿಲ್ಲ.

ಶಾಲಾ ವಿದ್ಯಾರ್ಥಿಗಳಿಗೆ ಮಂಜೂರು ಮಾಡಲಾಗುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಯೋಜನೆಗಾಗಿ ಮಾತ್ರ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಿರುವುದಿಲ್ಲ. ಆದಕಾರಣ, ಪ್ರಸಕ್ತ ಶೈಕ್ಷಣಿಕ ಸಾಲಿಗಾಗಿ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಿಕೊಂಡು ಮಂಜೂರಾತಿಯನ್ನು 2006–07ನೇ ಸಾಲಿನಲ್ಲಿ ಮುಂದುವರೆಸಲಾಗುವುದು.

**ಶ್ರೀ ಆರ್. ಧ್ರುವನಾರಾಯಣ** : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ನಾನು ಪ್ರಶ್ನೆ ಕೇಳತಕ್ಕಂತಹ ಸಂದರ್ಭದಲ್ಲಿ, ಅಂದರೆ 10 ದಿವಸಗಳ ಹಿಂದೆ ಪ್ರಶ್ನೆಯನ್ನು ಕೇಳತಕ್ಕಂತಹ ಸಂದರ್ಭದಲ್ಲಿ ಒಂದರಿಂದ ಏಳನೇ ತರಗತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗೆ ವರ್ಷಕ್ಕೆ 75 ರೂಪಾಯಿ ಕೊಡುವುದು, 8 ರಿಂದ 10ನೇ ತರಗತಿ ಓದತಕ್ಕಂತಹ ಮಕ್ಕಳಿಗೆ 100

ರೂಪಾಯಿ ಕೊಡತಕ್ಕಂಥದ್ದು ಹಲವಾರು ವರ್ಷಗಳಿಂದ ಸರ್ಕಾರ ಕೊಟ್ಟುಕೊಂಡು ಬಂದಿದೆ. ಆದರೆ ಈ ವರ್ಷ 2006–07ರ ಲೆಕ್ಕ ಶೀರ್ಷಿಕೆಯಲ್ಲಿ ಅದನ್ನು ಕೈ ಬಿಟ್ಟಿದ್ದಾರೆ. ಲಿಂಕ್ ಡಾಕ್ಯುಮೆಂಟ್‌ನಲ್ಲಿ ಕೈ ಬಿಟ್ಟಿದ್ದರು. ಬಹಳಷ್ಟು ಪ್ರತಿಭಟನೆಗಳೂ ಕೂಡ ಆಯಿತು. ಹೊರಗಡೆ ವಿದ್ಯಾರ್ಥಿ ಸಂಘಟನೆಗಳು, ದಲಿತ ಸಂಘಟನೆಗಳು, ಎಲ್ಲರೂ ಕೂಡ ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರನ್ನು ಮಕ್ಕಳಿಗೆ ನೀವು ಸ್ಕಾಲರ್‌ಷಿಪ್ ತಡೆ ಹಿಡಿದಿದ್ದೀರಿ, ಬಹಳಷ್ಟು ವರ್ಷಗಳಿಂದ ಕೊಡತಕ್ಕಂತಹ ಸ್ಕಾಲರ್‌ಷಿಪ್ ಅದು, ಅನಿವಾರ್ಯ ಅದನ್ನು ಕೊಡಬೇಕೆಂದು ಹೇಳಿದರು. ಮೊನ್ನೆ ಅಂದರೆ 27ನೇ ತಾರೀಖು ಎರಡು ದಿನಗಳ ಹಿಂದೆ ಮಾನ್ಯ ಸಚಿವರು ಅಧಿವೇಶನದಲ್ಲಿ ಇದನ್ನು ಮುಂದುವರೆಸಿಕೊಂಡು ಹೋಗುತ್ತೇವೆ, ಸರ್ಕಾರ ಕ್ರಮ ತೆಗೆದುಕೊಂಡಿದೆ ಎಂದು ಹೇಳಿದರು. ನಾನು ಅವರಿಗೆ ಹೇಳುತ್ತೇನೆ, ದಯಮಾಡಿ ತಾವು ಇಷ್ಟು ವರ್ಷಗಳಿಂದ ಕೊಡುತ್ತಿರತಕ್ಕಂತ ಅನುದಾನ 75 ರೂಪಾಯಿ 1 ರಿಂದ 7ನೇ ತರಗತಿ, 8 ರಿಂದ 10ನೇ ತರಗತಿಯವರೆಗೆ 100 ರೂಪಾಯಿ ಕೊಡುತ್ತಿದ್ದುದು ಈ ವರ್ಷ ಏಕೆ ತಡೆಹಿಡಿದರು ಎನ್ನುವುದನ್ನು ದಯಮಾಡಿ ಸದನದಲ್ಲಿ ಹೇಳಬೇಕು. ಇದು ಎಲ್ಲರಿಗೂ ಗೊತ್ತಾಗಬೇಕು. ಏಕೆಂದರೆ ಬಹಳಷ್ಟು ವರ್ಷಗಳಿಂದ ಬಡ ಕುಟುಂಬದ ಮಕ್ಕಳಿಗೆ ಒಂದು ಮಗುವಿಗೆ ವರ್ಷಕ್ಕೆ 75 ರೂಪಾಯಿ ಹಾಗೂ ಹೈಸ್ಕೂಲ್ ಮಕ್ಕಳಿಗೆ ಒಬ್ಬರಿಗೆ 100 ರೂಪಾಯಿ ಕೊಡುತ್ತಿರುವುದು. ಇಂಥದ್ದನ್ನು ಸರ್ಕಾರ ಏಕೆ ತಡೆಹಿಡಿದಿದೆ ಮತ್ತು ಇದರ ದುರುದ್ದೇಶ ಏನಿತ್ತು ಎಂಬುದನ್ನು ದಯಮಾಡಿ ಸದನದಲ್ಲಿ ಮಾನ್ಯ ಸಚಿವರು ತಿಳಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)** : ಮಾನ್ಯ ಛೇರ್ಮನ್‌ರವರೆ, ಈಗಾಗಲೇ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಒಂದು ಹೇಳಿಕೆ ಕೊಟ್ಟು ಇದರ ಬಗ್ಗೆ ತಿಳಿಸಿ 2006–07ನೇ ಸಾಲಿನಿಂದ ಎಸ್.ಸಿ:ಎಸ್.ಟಿ ಮಕ್ಕಳಿಗೆ 75 ರೂಪಾಯಿ ಹಾಗೂ 100 ರೂಪಾಯಿಗಳ ಸ್ಕಾಲರ್‌ಶಿಪ್‌ನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆಂದು ತಿಳಿಸಿದ್ದೇವೆ. ಆದರೆ ಮಾನ್ಯ ಸದಸ್ಯರು ಇದನ್ನು ಏಕೆ ಬ್ಯಾನ್ ಮಾಡಿದ್ದಿರಿ, ಏಕೆ ಮುಂದುವರೆಸಲಿಲ್ಲವೆಂದು ಕೇಳಿದ್ದಾರೆ. ಹಿಂದೆ ಸಮಾಜ ಕಲ್ಯಾಣ ಇಲಾಖೆಯಿಂದ ಹಣಕಾಸು ಇಲಾಖೆಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದರು. 2006–07ನೇ ಸಾಲಿನಲ್ಲಿ ನಾವು ಕೊಡುವಂಥ ಸ್ಕಾಲರ್‌ಶಿಪ್ 75 ರೂಪಾಯಿ ಹಾಗೂ 100 ರೂಪಾಯಿಗಳೇನಿದೆ ಇದು ಮಕ್ಕಳಿಗೆ ಏನೂ ಸಾಲುವುದಿಲ್ಲ. ಇದರ ಬದಲಾಗಿ ಹೊಸದಾಗಿ ಹಾಸ್ಟೆಲ್ ಕಟ್ಟುವುದಕ್ಕೆ ನಮಗೆ ಅದೇ ದುಡ್ಡನ್ನು ಹಾಸ್ಟೆಲ್‌ಗೆ ಇಡಬೇಕು ಎನ್ನುವ ಮಾತನ್ನು ಮುಂಚೆ ಇಲಾಖೆಯವರು ಕೇಳಿದ್ದರು. ಆ ದೃಷ್ಟಿಯಿಂದ ಹಣಕಾಸು ಇಲಾಖೆಯವರು ತಮ್ಮ ಬಜೆಟ್‌ನಲ್ಲಿ ಅವರು ಈ ದುಡ್ಡನ್ನು ಸ್ಕಾಲರ್‌ಶಿಪ್‌ಗೂ ಕೂಡ ಇಟ್ಟಿರುವುದಿಲ್ಲ ಹಾಗೂ ಹಾಸ್ಟೆಲ್‌ಗೂ ಇಟ್ಟಿರಲಿಲ್ಲ. ಈ ಹಿಂದೆ ಕಳುಹಿಸಿದ ಪ್ರಸ್ತಾವನೆಗೋಸ್ಕರ ಅವರು ಇದನ್ನು ರದ್ದುಮಾಡಿದ್ದರು. ಎಸ್.ಸಿ:ಎಸ್.ಟಿ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡಬಾರದು ಎಂದು ಸರ್ಕಾರದ ಉದ್ದೇಶವೇನಿರಲಿಲ್ಲ. ಅಂಥ ಕೆಟ್ಟ ಉದ್ದೇಶ ಸರ್ಕಾರದ್ದು ಇರುವುದಿಲ್ಲ. ಹಿಂದೆ ಸ್ಕಾಲರ್‌ಶಿಪ್ ದುಡ್ಡನ್ನು ಕಟ್ ಮಾಡಿಕೊಟ್ಟಿದ್ದರು.

ನಾನು ಸ್ಕಾಲರ್‌ಶಿಪ್ ನೀಡುವ ಬಗ್ಗೆ ಮತ್ತೆ ನಾನು ಮನವರಿಕೆಯನ್ನು ಮುಖ್ಯಮಂತ್ರಿಗಳಿಗೆ ಹಾಗೂ ಉಪ ಮುಖ್ಯಮಂತ್ರಿಗಳಿಗೆ ಮಾಡಿಕೊಟ್ಟು ಸ್ಕಾಲರ್‌ಶಿಪ್ ಕಟ್ ಮಾಡುವುದು ಒಳ್ಳೆಯ ಬೆಳವಣಿಗೆಯಲ್ಲವೆಂದು ಹೇಳಿದಾಗ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಅನೇಕ ದಲಿತ ಸಂಘಟನೆಗಳ ಜೊತೆ ಚರ್ಚೆ ಮಾಡಿ ಮತ್ತು ಹಣಕಾಸಿನ ಇಲಾಖೆ ಕಾರ್ಯದರ್ಶಿಯವರೊಂದಿಗೆ ಚರ್ಚೆ ಮಾಡಿ ಈ ದುಡ್ಡನ್ನು ಈಗ ಬಿಡುಗಡೆ ಮಾಡಿದ್ದಾರೆ. ಆದ್ದರಿಂದ ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಆರ್. ಧ್ರುವನಾರಾಯಣ** : ಮಾನ್ಯ ವೇರ್ಮನ್‌ರವರೆ, ಮಾನ್ಯ ಸಚಿವರ ಸ್ಕಾಲರ್‌ಶಿಪ್‌ಗಾಗಿ ಕೊಡುತ್ತಿರುವ ಹಣ ಸಾಲುವುದಿಲ್ಲವೆಂದು ಹೇಳಿದ್ದಾರೆ. 75 ರೂಪಾಯಿ ಹಾಗೂ 100 ರೂಪಾಯಿ ಬಹಳ ಕಡಿಮೆ ಎನ್ನುವ ದೊಡ್ಡ ಮಾತನ್ನು ಅವರೇ ಹೇಳಿದ್ದಾರೆ. ಮಾನ್ಯ ಸಚಿವರೇ, ತಮ್ಮ ಕಾಲದಲ್ಲಿ ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಹಾಸ್ಟೆಲ್‌ಗಾಗಿಯೇ ಬೇರೆ ಅನುದಾನವಿರುತ್ತದೆ. ಸ್ಕಾಲರ್‌ಶಿಪ್ ಹಣಕ್ಕೂ ಹಾಸ್ಟೆಲ್ ಹಣಕ್ಕೂ ಯಾವುದೇ ರೀತಿಯ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ದಯಮಾಡಿ ಇಂಥದ್ದು ಆಗಬಾರದು. ಏಕೆಂದರೆ ತಾವು ಹಣಕಾಸಿನ ಮಂತ್ರಿಗಳ ಜೊತೆ ಈ ವಿಷಯದ ಬಗ್ಗೆ ಮಾತನಾಡದಿದ್ದರೆ ಬಡವರ ಮಕ್ಕಳಿಗೆ ಅನುಕೂಲವಾಗುತ್ತಲೇ ಇರಲಿಲ್ಲ. ಅವರಿಗೆ ತುಂಬಾ ಅನ್ಯಾಯವಾಗುತ್ತಿತ್ತು.

**ಶ್ರೀ ಎ. ಕೃಷ್ಣಪ್ಪ** : ಇದು ಭಾರತ ಸರ್ಕಾರ ಹಣವನ್ನು ಕೊಡುವಂಥದ್ದು. ರೀ–ಇಂಬರ್ಸ್‌ಮೆಂಟ್ ಫಂಡ್‌ನಿಂದ ಕೊಡುವುದು. ನಿಮ್ಮ ಅಡ್ಮಿನಿಸ್ಟ್ರೇಶನ್‌ನವರು ಇದನ್ನು ನಿಲ್ಲಿಸುವುದಕ್ಕೆ ಹೇಗೆ ಮತ್ತು ಏಕೆ ಕ್ರಮ ತೆಗೆದುಕೊಂಡರು? ಹಾಸ್ಟೆಲ್ ಕನ್‌ಸ್ಟ್ರಕ್ಷನ್ ಆ್ಯಕ್ಟಿವಿಟೀಸ್ ಬೇರೆ, ಮಕ್ಕಳಿಗೆ ಕೊಡುವ ಸ್ಕಾಲರ್‌ಶಿಪ್ ಸ್ಕೀಂ ಬೇರೆ. ಅದನ್ನು ವಿತ್‌ಡ್ರಾ ಮಾಡುವುದಕ್ಕೆ ಯಾವ ಆಫೀಸರ್ ತೀರ್ಮಾನ ಮಾಡಿದರು ಮತ್ತು ಏತಕ್ಕಾಗಿ ಈ ರೀತಿಯ ತೀರ್ಮಾನ ಮಾಡಿದರು? Who is that Officer? ಇಂಥ ಬೇಜವಾಬ್ದಾರಿತನದ ತೀರ್ಮಾನ ತೆಗೆದುಕೊಂಡ ಆಫೀಸರ್ ಯಾರು? ಐಡೆಂಟಿಫೈ ಮಾಡಿದ್ದೀರಾ? ರೀ–ಇಂಬರ್ಸ್‌ಮೆಂಟ್‌ನ್ನು ಭಾರತ ಸರ್ಕಾರ ಕೊಡುತ್ತದೆ. ಆ ದುಡ್ಡನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಂಡವರ್‍ಯಾರು ಮತ್ತು ಈ ರೀತಿಯ ಕ್ರೈಸೀಸ್ ಕ್ರಿಯೇಟ್ ಮಾಡಿದವರ್‍ಯಾರು ಎಂಬ ಬಗ್ಗೆ ದಯಮಾಡಿ ಈ ಸದನಕ್ಕೆ ತಿಳಿಸಿ. How can somebody take? ಕ್ಯಾಬಿನೆಟ್ ಮುಂದೆ ಬಂದು ಕ್ಯಾಬಿನೆಟ್‌ನಲ್ಲಿ ಏಕಸ್ಮಾತ್ತಾಗಿ ಅದು ಅಂಥ ಬಹಳ ಮುಖ್ಯವಾದ ವಿಚಾರವಾದರೆ ಸಚಿವ ಸಂಪುಟ ಸಭೆ ನಡೆದು ಆ ಬಗ್ಗೆ ಬಹಳ ದೀರ್ಘವಾಗಿ ಸಮಾಲೋಚನೆಯನ್ನು ಮಾಡಿ ಪಾಲಿಸಿ ಡಿಸಿಶನ್ ಮಾಡಬಹುದು. ಎಷ್ಟೋ ವರ್ಷಗಳಿಂದ ಮಕ್ಕಳಿಗೆ ಕೊಡುವಂಥ 75 ರೂಪಾಯಿ ಮತ್ತು 100 ರೂಪಾಯಿಯನ್ನು ನಿಲ್ಲಿಸುವುದಕ್ಕೆ ಇರುವ ರೀ–ಇಂಬರ್ಸ್‌ಮೆಂಟ್ ಸ್ಕೀಂನ್ನು ಭಾರತ ಸರ್ಕಾರ ಕೊಡುವ ದುಡ್ಡು ನಿಲ್ಲಿಸುವುದಕ್ಕೆ ನಿಮಗೆ ಅಧಿಕಾರ ಕೊಟ್ಟವರು ಯಾರು? ಈ ಚೇಸ್ಟೆ ಮಾಡುವುದಕ್ಕೆ ಅವರಿಗೆ ಎಷ್ಟು ಧೈರ್ಯ? you must identify as to who is that officer?

**ಶ್ರೀ ಬಾಲಚಂದ್ರ ಲ. ಜಾರಕಿಹೊಳಿ** : ಮಾನ್ಯ ಛೇರ್ಮನ್‌ರವರೇ, ಈ ರೀತಿಯ ಪ್ರಸ್ತಾವನೆಯನ್ನು ಹಿಂದಿನ ಆಯುಕ್ತರು ಹಣಕಾಸಿನ ಇಲಾಖೆಗೆ ಕಳುಹಿಸಿದ್ದರು. ಅದಕ್ಕೋಸ್ಕರ ಈ ಎಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಣಕಾಸು ಇಲಾಖೆ ರೀ–ಇಂಬರ್ಸ್‌ಮೆಂಟ್ ಮಾಡಿದರೂ ದುಡ್ಡನ್ನು ಮೊದಲು ಸ್ಕಾಲರ್‌ಶಿಪ್‌ಗೋಸ್ಕರ ಹಣಕಾಸು ಇಲಾಖೆ ನಮಗೆ ಕೊಡುತ್ತದೆ. ಆಮೇಲೆ ಸೆಂಟ್ರಲ್ ಗೌವರ್ನ್‌ಮೆಂಟ್‌ನಿಂದ ಬರುತ್ತದೆ. ಅದಕ್ಕೂ ಮೊದಲು ರಾಜ್ಯ ಸರ್ಕಾರದ ಹಣಕಾಸು ಇಲಾಖೆ ಕೊಡುತ್ತದೆ. ಆದಕಾರಣ ಹಿಂದಿನ ಆಯುಕ್ತರು ಕೊಟ್ಟಂಥ ಪ್ರಸ್ತಾವನೆ ಮೇಲೆ ಅವರು ಈ ರೀತಿ ಮಾಡಿದ್ದರು. ಇದರಲ್ಲಿ ಯಾರದ್ದೂ ಕೆಟ್ಟ ಉದ್ದೇಶವಿಲ್ಲ. ಎಸ್‌ಸಿ : ಎಸ್‌ಟಿ ಮಕ್ಕಳಿಗೆ ಅನ್ಯಾಯ ಮಾಡಬೇಕು ಎಂಬ ಕೆಟ್ಟ ಉದ್ದೇಶವಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದರು. ಈಗ ಮಾನ್ಯ ಸದಸ್ಯರುಗಳು ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಿ, ಅದನ್ನು ಗಮನದಲ್ಲಿ ಇಟ್ಟುಕೊಂಡು ಈ ಸರ್ಕಾರ ಪರಿಶೀಲನೆ ಮಾಡುತ್ತದೆ.

**ಶ್ರೀ ಆರ್. ಧ್ರುವನಾರಾಯಣ್** : ಸ್ಕಾಲರ್‌ಶಿಪ್‌ಗಾಗಿ ಕೊಡತಕ್ಕಂಥ ಹಣವನ್ನು ಕಟ್ಟಡಕ್ಕೆ ಬಳಸತಕ್ಕಂಥದ್ದು ಸರಿಯಲ್ಲ. ಅದು ಕಾನೂನಿಗೆ ವಿರುದ್ಧವಾಗುತ್ತದೆ. ಭಾರತ ಸರ್ಕಾರ ರೀ–ಇಂಬರ್ಸ್‌ಮೆಂಟ್‌ನಲ್ಲಿ ಸ್ಕಾಲರ್‌ಶಿಪ್‌ಗಾಗಿ ಕೊಡತಕ್ಕಂಥ ಹಣವನ್ನು ನೀವು ಬಿಲ್ಡಿಂಗ್‌ಗಾಗಿ ಹೇಗೆ ಉಪಯೋಗ ಮಾಡುತ್ತೀರಿ?

**ಶ್ರೀ ಬಾಲಚಂದ್ರ ಲ. ಜಾರಕಿಹೊಳಿ** : ಅದಕ್ಕೋಸ್ಕರ ತಾವು ಹೇಳಿರುವುದನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ಹಾಸ್ಟೆಲ್‌ಗೋಸ್ಕರ ದುಡ್ಡನ್ನು ಸೆಪರೇಟ್ ಪೂಲ್ ಮಾಡಿಕೊಂಡು ಹಾಸ್ಟೆಲ್‌ಗಳನ್ನು ಸೆಪರೇಟ್ ಆಗಿ ಮಾಡುತ್ತೇವೆ. ಈಗ ಸ್ಕಾಲರ್‌ಶಿಪ್‌ನ್ನು ಕೊಡುತ್ತಿದ್ದೇವೆ. ಸ್ಕಾಲರ್‌ಶಿಪ್ ಕೊಡಬಾರದು ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ. ಮಾನ್ಯ ಸದಸ್ಯರುಗಳ್ಯಾರೂ ತಪ್ಪು ಭಾವಿಸಬಾರದು. ಏಕೆಂದರೆ ಹಾಸ್ಟೆಲ್‌ಗೋಸ್ಕರ ಬೇರೆ ತರಹ ಮಾಡಿದ್ದೇವೆ. ಅದಕ್ಕೆ ದುಡ್ಡನ್ನು ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಸ್ಕಾಲರ್‌ಶಿಪ್‌ಗೆ ಸೆಪರೇಟ್ ಆಗಿ ಮಾಡಿಕೊಳ್ಳುತ್ತೇವೆ.

**ಶ್ರೀ ಎ. ಕೃಷ್ಣಪ್ಪ** : ಇದು ನಗೆಪಾಟಿಲಾಗಿದೆ. ಇಂಥ ಒಂದು ಮೇಜರ್ ವಿಷಯದ ಬಗ್ಗೆ ಯಾರೋ ಒಬ್ಬ ಆಫೀಸರ್ ತೀರ್ಮಾನ ಮಾಡುತ್ತಾನೆ, ಕ್ಯಾಬಿನೆಟ್ ಗಮನಕ್ಕೇ ಬರಲಿಲ್ಲವೆಂದರೆ ಹೇಗೆ? ಮತ್ತೆ ಈ ದುಡ್ಡನ್ನೂ ಕೂಡ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ ಉಪಯೋಗ ಮಾಡಿಕೊಳ್ಳಲು ಬರುವುದಿಲ್ಲ. ಇದಕ್ಕಾಗಿಯೇ ಪ್ರತ್ಯೇಕವಾಗಿ ಹುಡ್ಕೋದಿಂದ ಸಾಲವನ್ನು ತೆಗೆದುಕೊಂಡಿದ್ದೇವೆ ಹಾಗೂ ಬೇರೆ ಬೇರೆ ಆರ್ಥಿಕ ಸಂಸ್ಥೆಗಳಿಂದ ಸಾಲವನ್ನು ತೆಗೆದುಕೊಂಡು ಹಾಸ್ಟೆಲ್‌ಗಳನ್ನು ಕಟ್ಟಿರುವುದು ಇತಿಹಾಸದಲ್ಲಿ ಇದೆ. ಇವರು ಸ್ಕಾಲರ್‌ಶಿಪ್‌ನ್ನು ನಿಲ್ಲಿಸಿಬಿಟ್ಟು, ಈಗ ಆ ರೀತಿ ಮಾಡಲು ಯಾವ ಅಧಿಕಾರಿ ತೀರ್ಮಾನ ಮಾಡಿದ್ದು ಹೇಳಿ ಎಂದು ಕೇಳಿದರೆ ಹೇಳುತ್ತಿಲ್ಲವಲ್ಲಾ.

**ಛೇರ್ಮನ್** : ಈಗ ಸ್ಕಾಲರ್‌ಶಿಪ್ ಕಂಟಿನ್ಯೂ ಮಾಡಿದ್ದೇವೆ ಎಂದು ಹೇಳಿದ್ದಾರೆ.

**ಶ್ರೀ ಆರ್. ಧ್ರುವನಾರಾಯಣ** : ಈಗ ಕಂಟಿನ್ಯೂ ಮಾಡುತ್ತೇವೆಂದು ಹೇಳುತ್ತಿದ್ದಾರೆ.

**ಶ್ರೀ ಎ. ಕೃಷ್ಣಪ್ಪ** : ಧ್ರುವನಾರಾಯಣರವರೇ, ಕಂಟಿನ್ಯೂ ಮಾಡದಿದ್ದರೆ ಕಂಟಿನ್ಯೂ ಮಾಡಿಸುವುದಕ್ಕೆ ನಾವು ಇದ್ದೇವೆ. ಜನಪ್ರತಿನಿಧಿಗಳು ನಾವು ಇಲ್ಲಿದ್ದೇವೆ. ಅದನ್ನು ಯಾರದೋ ಜೇಬಿನಿಂದ ಕೊಡುವುದಲ್ಲ. ಯಾರದೋ ಮುಲಾಜಿಗೆ ಕೊಡುವುದಲ್ಲ. ಯಾರೋ ಭಿಕ್ಷೆ ಕೊಡುವುದಲ್ಲ. ಕಂಟಿನ್ಯೂ ಮಾಡಲೇಬೇಕು. ಆದರೆ ಕಂಟಿನ್ಯೂ ಮಾಡದ ಹಾಗೆ ತೀರ್ಮಾನವನ್ನು ತೆಗೆದುಕೊಂಡ ಅಧಿಕಾರಿ ಯಾರು? ಅದನ್ನು ಈ ಸದನದಲ್ಲಿ ಹೇಳಬೇಕು. ಅದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ನೀವು ಮಂತ್ರಿಗಳಾಗಿ ನಿಮ್ಮ ಗಮನಕ್ಕೇ ಬರದ ಹಾಗೆ ಆ ಅಧಿಕಾರಿ ನಿಲ್ಲಿಸುತ್ತಾನೆ, ಆಮೇಲೆ ಕ್ರೈಸೀಸ್ ಬರುತ್ತದೆ, ಎಜಿಟೇಶನ್ ಮಾಡುತ್ತಾರೆ, ಮಂತ್ರಿಗಳ ಮುಂದೆ ಅಪೀಲ್ ಹಾಕುತ್ತಾರೆ, ಆಮೇಲೆ ನೀವು ಅದನ್ನು ಕಂಟಿನ್ಯೂ ಮಾಡುತ್ತೀರಿ. ಆದರೆ ಈ ರೀತಿಯಲ್ಲಿ ಕ್ರೈಸೀಸ್‌ಗೆ ಯಾರು ಕಾರಣ ಎಂಬುದನ್ನು ನೀವು ಹೇಳಬೇಕು. ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. How can somebody withdraw this?

**ಶ್ರೀ ವೀರಣ್ಣ ಚರಂತಿಮಠ್** : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸಚಿವರು ಏನು ಹೇಳಿದ್ದಾರೆ ಅದು ಸರಿಯಲ್ಲ. ಏಕೆಂದರೆ ನಿಜವಾಗಿ ಸರ್ಕಾರದ ಉದ್ದೇಶವೇನಿತ್ತೆಂದರೆ ಈ ಹಣವನ್ನು ಉಪಯೋಗ ಮಾಡಿಕೊಂಡು ಸೈಕಲ್‌ಗಳನ್ನು ಕೊಡಬೇಕು ಎನ್ನುವ ಉದ್ದೇಶ ಸರ್ಕಾರದ್ದು ಇತ್ತು. ಅದನ್ನು ಮಾಡುವುದಕ್ಕೆ ಆಗಲಿಲ್ಲವಾದ್ದರಿಂದ ಈಗ ನೀವು ಈ ರೀತಿ ಹೇಳುತ್ತಿದ್ದೀರಿ. ಏಕೆಂದರೆ ಒಂದು ವೇಳೆ ಯಾವುದೇ ಅಧಿಕಾರಿ ತೀರ್ಮಾನ ತೆಗೆದುಕೊಂಡಿದ್ದರೂ ಸರ್ಕಾರದ ಪಾಲಿಸಿ ಮ್ಯಾಟರ್ ಆಗಿದ್ದರೂ ಇದು ನಿಮ್ಮ ಸರ್ಕಾರದ ಗಮನಕ್ಕೇ ಬಂದಿಲ್ಲ. ಪ್ರತಿಭಟನೆ ಆದಮೇಲೆ ಸರ್ಕಾರದ ಗಮನಕ್ಕೆ ಬರುತ್ತದೆಂದರೆ ಸರ್ಕಾರದ ಉದ್ದೇಶ ಸರಿಯಿಲ್ಲ. ಅಂದರೆ ಎಸ್‌ಸಿ : ಎಸ್‌ಟಿ ಜನರ ಬಗ್ಗೆ ಇರತಕ್ಕಂಥ ನಿಮ್ಮ ಧೋರಣೆ ಏನಿದೆ ಎಂಬುದನ್ನು ತೋರಿಸುತ್ತದೆ.

**ಶ್ರೀ ನೆ.ಲ. ನರೇಂದ್ರಬಾಬು** : ಮಾನ್ಯ ಛೇರ್ಮನ್‌ರವರೆ, ಕೇಂದ್ರ ಸರ್ಕಾರದಿಂದ ಬರತಕ್ಕಂಥ 18 ಪರ್ಸೆಂಟ್ ಸ್ಕಾಲರ್‌ಶಿಪ್ ಹಣ ಏನಿದೆ, ಒಂದು ದುರಂತವೆಂದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅಂದರೆ ಏಡೇಡ್ ಹಾಗೂ ಅನ್-ಏಡೇಡ್ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುವವರಿಗೆ ಅಪ್ಲಿಕೇಷನ್ ಕೂಡ ಕೊಡುತ್ತಿಲ್ಲ. ಕೇಳಿದರೆ ಸ್ಕೂಲ್ ಬಿಟ್ಟು ಹೋಗಿ, ಕಾಲೇಜ್ ಬಿಟ್ಟು ಹೋಗಿ ಎಂದು ಹೇಳುತ್ತಾರೆ. ದಯವಿಟ್ಟು ಮಾನ್ಯ ಸಚಿವರಿಗೆ ತಮ್ಮ ಮುಖೇನ ವಿನಂತಿ ಮಾಡುತ್ತೇನೆ, ಅಲ್ಲಿ ರೋಸ್ಟರ್ ಸಿಸ್ಟಂನ್ನು ಮೊದಲನೆಯದಾಗಿ ಫಾಲೋ ಮಾಡಿಲ್ಲ. ಫಾಲೋ ಮಾಡಿಯಾದ ಮೇಲೆ ಆ ಮಕ್ಕಳಿಗೆ ಅಪ್ಲಿಕೇಶನ್ ಸಹ ಕೊಡುವುದಿಲ್ಲ. ದಯವಿಟ್ಟು ತಾವು ಸಮೀಕ್ಷೆ ಮಾಡಿಸಬೇಕು. ಏಡೇಡ್ ಹಾಗೂ ಅನ್-ಏಡೇಡ್ ಶಿಕ್ಷಣ ಸಂಸ್ಥೆಗಳಲ್ಲಿರತಕ್ಕಂಥ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ನೆರವನ್ನು ಒದಗಿಸುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಸಿ. ಪಾಟೀಲ್** : ಮಾನ್ಯ ಛೇರ್ಮನ್‌ರವರೆ, ಸ್ಕಾಲರ್‌ಶಿಪ್ ಬಂದಿಲ್ಲವೆನ್ನುವುದು ಒಂದು ವಿಚಾರವಾದರೆ, ಸ್ಕಾಲರ್‌ಶಿಪ್ ಬಂದಿದ್ದರೂ ಕೂಡ ಎಸ್.ಸಿ. : ಎಸ್.ಟಿ. ವಿದ್ಯಾರ್ಥಿಗಳಿಗೆ ಅದು ಮುಟ್ಟಿಲ್ಲವೆನ್ನುವುದು ಬಹಳ ದೊಡ್ಡ ನೋವಿನ ಸಂಗತಿ. ನಮ್ಮ ತಾಲ್ಲೂಕಿನಲ್ಲಿ ಒಂದು ವಿದ್ಯಾ ಸಂಸ್ಥೆಯಲ್ಲಿ ಮೊನ್ನೆ ಏಪ್ರಿಲ್‌ಗಿಂತ ಮುಂಚೆ 2250 ರೂಪಾಯಿಗಳನ್ನು ಎಸ್‌ಸಿ : ಎಸ್‌ಟಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ನ್ನು ವಿತರಣೆ ಮಾಡಬೇಕೆಂದಾಗ ಆ ಸಂಸ್ಥೆಯವರು ಏನು ಮಾಡಿದರೆಂದರೆ ಪ್ರತಿ ವಿದ್ಯಾರ್ಥಿಯಿಂದ 250 ರೂಪಾಯಿಗಳನ್ನು ತೆಗೆದುಕೊಂಡು 2250 ರೂಪಾಯಿಗಳಿಗೆ ಚೆಕ್‌ನ್ನು ಕೊಟ್ಟಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಯಿಂದ 250 ರೂಪಾಯಿಗಳನ್ನು ಅಕ್ರಮವಾಗಿ ವಸೂಲಿ ಮಾಡಿಕೊಂಡಿದ್ದಾರೆ. ಸ್ಕಾಲರ್‌ಶಿಪ್ ಹಣದಲ್ಲಿ ದುರುಪಯೋಗವಾಗಿದೆ. ಇದರ ಬಗ್ಗೆ ಯಾವ ಅಧಿಕಾರಿಗಳೂ ಕೂಡ ಗಮನ ಹರಿಸಿಲ್ಲ. ಗಮನ ಹರಿಸಿದ್ದರೂ ಕೂಡ ಅವರು ಸಿಕ್ಕಿ ಹಾಕಿಕೊಳ್ಳದ ರೀತಿಯಲ್ಲಿ ಅವರು ಕೆಲಸವನ್ನು ಮಾಡಿದ್ದಾರೆ. ಇಂಥ ಹಲವಾರು ವಿಷಯಗಳು ಈಗ ನಡೆಯುತ್ತಿವೆ. ಈ ಸಂದರ್ಭದಲ್ಲಿ ಸನ್ಮಾನ್ಯ ಸಚಿವರು ಅಧಿಕಾರಿಗಳಿಗೆ ಹೇಳಬೇಕು. ಈಗಾಗಲೇ ಪ್ರಸಕ್ತ ವರ್ಷ ಪ್ರಾರಂಭವಾಗಿದೆ, ಈಗಾಗಲೇ ಎಲ್ಲಾ ಅಧಿಕಾರಿಗಳಿಗೆ ಸೂಕ್ತವಾದಂಥ ನಿರ್ದೇಶನವನ್ನು ಕೊಟ್ಟು ಇನ್ನು ಮುಂದಾದರೂ ಕೂಡ ಇಂಥ ಘಟನೆಗಳು ಮರುಕಳಿಸದಂತೆ ಮಾಡಬೇಕೆಂದು ತಮ್ಮ ಮುಖೇನ ಸಮಾಜ ಕಲ್ಯಾಣ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಬಾಲಚಂದ್ರ ಲ. ಜಾರಕಿಹೊಳಿ** : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರುಗಳು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಸರ್ಕಾರ ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸವನ್ನು ಮಾಡುತ್ತದೆ. ದಯಮಾಡಿ ನಾನೂ ಕೂಡ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಈಗ ನಾವು ಒಳ್ಳೆಯ ಕೆಲಸ ಮಾಡಿ ಸ್ಕಾಲರ್‌ಶಿಪ್ ಕೊಡುವುದನ್ನು ಮುಂದುವರಿಸಿದ್ದೇವೆ.

**ಶ್ರೀ ಆರ್. ಧ್ರುವನಾರಾಯಣ** : ತಾವು ಮುಂದುವರಿಸುವುದಲ್ಲ. ಅದು ಕಂಪಲ್‌ಸರಿ ಕೊಡಲೇಬೇಕು. ಏಕೆಂದರೆ ಅದು ಭಾರತ ಸರ್ಕಾರ ಕೊಡುವ ಸ್ಕಾಲರ್‌ಶಿಪ್ ಯೋಜನೆ. ಅದನ್ನು ರಾಜ್ಯ ಸರ್ಕಾರ ತಡೆಹಿಡಿಯುವುದಕ್ಕೆ ಆಗುವುದಿಲ್ಲ.

**ಶ್ರೀ ಎ. ಕೃಷ್ಣಪ್ಪ** : ಈ ಹಣವೇನೂ ತಾವು ಕೊಡುವ ಭಿಕ್ಷೆಯೂ ಅಲ್ಲ, ದಾನವೂ ಅಲ್ಲ. It is mandatory.

**(ಗೊಂದಲ)**

**ಶ್ರೀ ಬಾಲಚಂದ್ರ ಲ. ಜಾರಕಿಹೊಳಿ** : ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ನಾನು ಮುಖ್ಯಮಂತ್ರಿಗಳಿಗೆ ಕನ್‌ವಿನ್ಸ್ ಮಾಡಿ ಹೇಳಿದ್ದೇನೆ, ಈ ರೀತಿ ಆಗಿತ್ತು ಎಂದು ಹೇಳಿದ್ದೇನೆ. ಒಂದು ಮಾತನ್ನು ಸದನದಲ್ಲಿ ಹೇಳಬಯಸುತ್ತೇನೆ, ತಾವು ಕೇಳಿದಿರಿ ಯಾವ ಅಧಿಕಾರಿ ಈ ರೀತಿ ಮಾಡಿದ್ದು ಎಂದು. ಯಾವ ಅಧಿಕಾರಿ ಆ ತರಹ ಪ್ರಪೋಸಲ್‌ನ್ನು ಕಳುಹಿಸಿದರೋ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.